


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 98-100
© 2020 IJKR
www.kannadajournal.com
Received: 15-06-2020
Accepted: 19-07-2020

**Pushparaj Annarao**
Research Scholar,
Gulbarga University,
Kalaburagi, Karnataka,
India

**Corresponding Author:**
**Pushparaj Annarao**
Research Scholar,
Gulbarga University,
Kalaburagi, Karnataka,
India

# ಜಾನಪದ ಸಾಹಿತ್ಯ : ಬಸವರಾಜ ಸಬರದ

**Pushparaj Annarao**

ಜಾನಪದವೆಂಬುದು ಒಂದು ಪ್ರದೇಶದ ಸಂಸ್ಕೃತಿ, ಅದು ಆ ನೆಲದ ಜೀವನ ವಿಧಾನ. ಹೀಗಾಗಿ ಫೋಕ್ ಮತ್ತು ಫೋಕಲೋರ್‌ಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಜೀವನ ವಿಧಾನದ ಎಲ್ಲ ಆಯಾಮಗಳನ್ನು ಒಳಗೊಂಡಿರುವುದು 'ಜಾನಪದ', ಒಂದೊಂದು ವಿಷಯದ ಬಗೆಗೆ ಹೇಳುವುದು 'ಜನಪದ' ಎಂಬಂತಹ ನಿಲುವುಗಳು ಈಗಾಗಲೇ ಸ್ಪಷ್ಟವಾಗಿವೆ. ಜನಪದ ಸಾಹಿತ್ಯ ಜನಪದ ಕಲೆ ಜನಪದ ಸಂಗೀತ ಹೀಗೆ ಹತ್ತಾರು ವಿಷಯಗಳನ್ನು ಜಾನಪದದ ಗರ್ಭದಲ್ಲಿ ಕಾಣಬಹುದಾಗಿದೆ. ಏಳನೇ ಶತಮಾನ ದಲ್ಲಿ ದೊರೆತ ಬಾದಾಮಿ ಶಾಸನದಲ್ಲಿಯೇ ಜನಪದ ಸಾಹಿತ್ಯದ ತಾಯಿಬೇರೆನಿಸಿದ ತ್ರಿಪದಿ ಪ್ರಕಟವಾಗಿದೆ. ಕನ್ನಡದ ಮೊದಲ ಕೃತಿ ಕವಿರಾಜಮಾರ್ಗದಲ್ಲಿ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತರಾದ" ಜನಪದರ ಹಿರಿಮೆಯಂತಹದೆಂಬುದನ್ನು ಹೇಳಲಾಗಿದೆ. ಕನ್ನಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಸಂಬಂಧಿಸಿದಂತೆ ಪಾಶ್ಚಾತ್ಯ ವಿದ್ವಾಂಸರ ಶ್ರಮವನ್ನೂ ಸ್ಮರಿಸಬೇಕಾಗುತ್ತದೆ. ಪ್ರಾರಂಭದಲ್ಲಿ ಬಂದ ಫ್ಲೀಟ್‌ರು ಸಂಗ್ರಹಿಸಿದ ಲಾವಣಿಗಳು ಗಮನಾರ್ಹ ಸಂಗ್ರಹವಾಗಿದೆ.

ಕನ್ನಡ ಜನಪದ ಸಾಹಿತ್ಯದ ಸಂಗ್ರಹ ಇಪ್ಪತ್ತನೇ ಶತಮಾನದಲ್ಲಿ ತೃಪ್ತಿಕರವಾಗಿದೆ.ಇಪ್ಪತ್ತೊಂದನೇ ಶತಮಾನದಲ್ಲಿ ಹೊಸ ಸಂಗ್ರಹ ತುಂಬ ಕಡಿಮೆಯಾಗಿದೆ. ಹತ್ತೊಂಬತ್ತನೇ ಶತಮಾನದಲ್ಲಿ ಜನಪದ ಸಾಹಿತ್ಯ ಸಂಗ್ರಹಕಾರ್ಯಕ್ಕೆ ಪಾಶ್ಚಾತ್ಯ ವಿದ್ವಾಂಸರು ಪ್ರೇರಣೆ ನೀಡಿದರು. ಇಪ್ಪತ್ತನೇ ಶತಮಾನದ ಮಧ್ಯಭಾಗದಿಂದ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಚುರುಕಾಯಿತು. ಹಲಸಂಗಿ ಗೆಳೆಯರ 'ಗರತಿಯ ಹಾಡು', 'ಮಲ್ಲಿಗೆ ದಂಡೆ', 'ಜೀವನ ಸಂಗೀತ',ದಂತಹ ಸಂಗ್ರಹಗಳು ಚಾರಿತ್ರಿಕವಾಗಿ ತುಂಬ ಮುಖ್ಯವಾದ ಕೃತಿಗಳಾಗಿವೆ. ನಂತರದಲ್ಲಿ ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಆನಂದಕಂದ, ಮತ್ತಿಘಟ್ಟ ಕೃಷ್ಣಮೂರ್ತಿ, ಡಾ. ಎಂ.ಎಸ್. ಸುಂಕಾಪುರ, ಗೊ.ರು.ಚ., ಎಸ್.ಕೆ. ಕರೀಂ ಖಾನ್, ಡಾ.ಜೀಶಂಪ ಮೊದಲಾದವರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಹತ್ವದ ಸಂಕಲನಗಳನ್ನು ಹೊರತಂದಿದ್ದಾರೆ.

ಇನ್ನು ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಡಾ. ಚೆನ್ನಣ್ಣ ವಾಲೀಕಾರ, ಡಾ. ಪಿ.ಕೆ.ಖಂಡೋಬಾ, ಡಾ. ವೀರಣ್ಣ ದಂಡೆ, ಡಾ.ಡಿ.ಬಿ.ನಾಯಕ, ಡಾ. ಬಿ.ಎಸ್. ಪೋಲಿಸ್‌ಪಾಟೀಲ್, ಡಾ.ಎಚ್.ಟಿ. ಪೋತೆ, ಡಾ. ಟಿ.ಎಂ. ಭಾಸ್ಕರ್, ಡಾ. ಹಣಮಂತರಾವ ದೊಡ್ಡಮನಿ ಹೀಗೆ ಮುಂತಾದವರು ಪಿಎಚ್.ಡಿ ಸಂಶೊಧನ ಅಧ್ಯಯನ ಕೈಗೊಂಡು ಮಹಾಪ್ರಬಂಧಗಳನ್ನು ಪ್ರಕಟಗೊಳಿಸಿದ್ದಾರೆ. ಅಲ್ಲದೇ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಡಾ. ಬಸವರಾಜ ಸಬರದ ರವರು ಬಂಡಾಯ ಸಾಹಿತ್ಯದ ಮುಂಚುಣಿಯಲ್ಲಿರುವ ಸಾಹಿತಿಗಳಲ್ಲಿ ಒಬ್ಬರಾಗಿದ್ದು, ಬಂಡಾಯ ಸಾಹಿತ್ಯಕಷ್ಟೇ ಸೀಮಿತವಾಗದೇ ವಿಮರ್ಶೆ, ಕಾವ್ಯ, ಬೀದಿ ನಾಟಕಗಳು, ಗಜಲ್, ಸಂಪಾದನೆ, ಸಂಶೋಧನೆ, ವಿಚಾರ ಸಾಹಿತ್ಯ, ಜೀವನಚರಿತ್ರೆ, ಅಲ್ಲದೇ ಜಾನಪದ ಸಾಹಿತ್ಯಕ್ಕೂ ತಮ್ಮ ಸಾಹಿತ್ಯೀಕ ಕೊಡುಗೆಗಳನ್ನು ನೀಡಿದ್ದಾರೆ. ನನ್ನ ಲೇಖನ ಬಸವರಾಜ ಸಬರದ ಅವರ ಜಾನಪದ ಸಾಹಿತ್ಯಿಕ ಕೊಡುಗೆಗೆ ಒಳಪಟ್ಟಿರು ವುದ್ದರಿಂದ ಅವರ ಜಾನಪದ ವಿಚಾರಗಳನ್ನು ಮತ್ತು ಕೃತಿಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಡಾ. ಬಸವರಾಜ ಸಬರದರವರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ೧೧ಕ್ಕೂ ಹೆಚ್ಚು ಕೃತಿಗಳನ್ನು ಸ್ವತಂತ್ರ ಮತ್ತು ಸಂಪಾದನೆ, ಪ್ರಧಾನ ಸಂಪಾದನೆ ಮಾಡುವುದರ ಮೂಲಕ ಪ್ರಕಟಗೊಳಿಸಿದ್ದಾರೆ. ಇವರ 'ಬಹುಮುಖಿ ಜಾನಪದ' ಕೃತಿಗೆ 'ಜಾನಪದ ಅಕಾಡೆಮಿ' ಪ್ರಶಸ್ತಿ ಲಭಿಸಿದೆ. ಹೈದ್ರಾಬಾದ ಕರ್ನಾಟಕ ತತ್ವಪದ ಸಾಹಿತ್ಯ ಕುರಿತು, ತತ್ವಪದಕಾರರನ್ನು ಕುರಿತು ವಿಶೇಷ ಸಂಶೋಧನೆ ಮಾಡಿದ್ದಾರೆ.

ಇವರ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಿದ ಕೃತಿಗಳು ಹೀಗಿವೆ. ಅವುಗಳು ಜಾನಪದ ಆಯಾಮಗಳು (ಪ್ರಧಾನ ಸಂಪಾದಕರು), ಜನಪದ ದೈವಗಳು, ಬಂಡಾಯ ಜಾನಪದ, ಜಾನಪದ ಆಯಾಮಗಳು, ಕಡಕೋಳ ಮಡಿವಾಳಪ್ಪನವರ ಸಾಹಿತ್ಯ, ರಾಯಚೂರು ಜಿಲ್ಲೆಯ ಅನಭಾವಿ ಕವಿಗಳು, ಗುಲ್ಬರ್ಗ ಜಿಲ್ಲೆಯ ಅನುಭಾವಿ ಕವಿಗಳು, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳು, ಹೈದ್ರಾಬಾದ ಕರ್ನಾಟಕ ತತ್ವಪದಗಳು, ಕೂಡಲೂರ ಬಸವಲಿಂಗ ಶರಣರು ಮತ್ತು ಇತರರ ತತ್ವಪದಗಳು, ಹೀಗೆ ಇತರೆ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ಮೌಲಿಕ ಲೇಖನಗಳನ್ನು ರಚಿಸಿ ಪ್ರಕಟಪಡಿಸಿದ್ದಾರೆ. ಇವರು ಪ್ರಕಟಿಸಿದ ಕೃತಿಗಳಲ್ಲಿನ ಜನಪದ ಮೌಲ್ಯಗಳನ್ನು ಕಾಣಬಹುದು.

ಬಸವರಾಜ ಸಬರದ ಅವರು ತಮ್ಮ ಕೃಷಿ ಜಾನಪದದಲ್ಲಿ ಹೀಗೆ ಉಲ್ಲೇಖಿಸುತ್ತಾರೆ. ಕೃಷಿ ಜಾನಪದ ತುಂಬ ವಿಸ್ತಾರವಾಗಿರುವ ಕ್ಷೇತ್ರವಾಗಿದೆ. ಭಾರತದಂತಹ ದೇಶದಲ್ಲಿ ಕೃಷಿಯೇ ಪ್ರಧಾನ ಉದ್ಯೋಗವಾಗಿದೆ. ಜನಪದ ಸಾಹಿತ್ಯ, ಸಂಸ್ಕೃತಿ ಕೃಷಿಕರಿಂದಲೇ ಬೆಳೆದು ನಿಂತಿದೆ. ಆದರೆ ಜಾಗತೀಕರಣದ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಏರು ಪೇರು ನಡೆದಿದೆ. ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಮೇಲೆ ಪೋಲಿಸರ ಲಾಠೀ ಪ್ರಹಾರ ನಡೆಯುತ್ತಲೇ ಇದೆ. ಬರಗಾಲ ಯಾವಾಗಲೂ ರೈತರನ್ನು ಕಾಡುತ್ತಲೇ ಬಂದಿದೆ. ಬಯಲುನಾಡಿನ ರೈತರಂತೂ ಸದಾ ಮುಗಿಲಕಡೆಗೆ ನೋಡುತ್ತಿರುತ್ತಾರೆ. ಮಳೆ ಬಂದರೆ ಬೆಳೆ, ಬೆಳೆ ಬಂದರೆ ಸುಗ್ಗಿ. ಮಳೆ ಬಾರದೆ ಬರಗಾಲ ಬಿದ್ದಾಗ ರೈತ ಎದೆ ಒಡೆದುಕೊಳ್ಳುತ್ತಾನೆ. ಬಿತ್ತಿದ ಬೀಜಗಳು ಭೂಮಿಯಲ್ಲಿ ಬತ್ತಿ ಹೋದಾಗ ಕಣ್ಣೀರು ಸುರಿಸುತ್ತಾನೆ. ಬರಗಾಲದ ತೀವ್ರತೆಯೆಂತ ಹದೆಂಬುದನ್ನು ಕೃಷಿ ಜಾನಪದದಲ್ಲಿ ಮನಕರಗುವಂತೆ ಚಿತ್ರಿಸಲಾಗಿದೆ.

"ಒಕ್ಕಲಗೇರ್ಯಾಗ ಮಳಿರಾಜಾ ಅವರು
ಮಕ್ಕಳು ಮಾರ್ಯಾರ ಮಳಿರಾಜಾ
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತುಂತತಿರಗಯಾರ ಮಳಿರಾಜಾ"

ಮಳೆಬಾರದೆ ಬರಬಿದ್ದ ಸಂದರ್ಭದಲ್ಲಿ ರೈತರು ತಮ್ಮ ಹಟ್ಟಯಲ್ಲಿ ಹುಟ್ಟಿದ ಮಕ್ಕಳನ್ನೆ ಮಾರುವ ದೃಶ್ಯ ಹೃದಯವಿದ್ರಾವಕವಾಗಿದೆ. ಬರಗಾಲ ಸಂದರ್ಭದಲ್ಲಿ ಶ್ರೀಮಂತರು ದವಸ-ಧಾನ್ಯಗಳನ್ನು ಕೂಡಿಹಾಕಿ ಹೆಚ್ಚು ಹಣಕ್ಕೆ ಮಾರಾಟ ಮಾಡುವುದು, ಬಡ್ಡಿಯ ಹೆಸರಿನಲ್ಲಿ ಬಡವರನ್ನು ಸುಲಿದು ತಿನ್ನುವುದು ಸಾಮಾನ್ಯವಾಗಿದೆ. ರೈತರ ಹೆಸರಿನಲ್ಲಿ ಅಧಿಖಾರಕ್ಕೆ ಬಂದ ರಾಜಕಾರಣಿಗಳು ರೈತನನ್ನು ಮರೆತುಬಿಡುತ್ತಾರೆ. ಹೀಗಾಗಿ ರೈತನ ಪಾಡು ಬಯಲುನಾಡಿನ ಪ್ರದೇಶಗಳಲ್ಲಿ ಚಿಂತಾಜನಕವಾಗಿದೆ.

ಬಸವರಾಜ ಸಬರದರವರು ತತ್ವಪದಕಾರರ ಬಗೆಗೆ ಕ್ಷೇತ್ರಕಾರ್ಯ ಮಾಡುವಾಗ ಜನಸಮುದಾದ ಸೌಹಾರ್ದತೆಯನ್ನು ಕಂಡು ಬೆರಗಾಗಿದ್ದೇನೆ ಎಂದು ಹೇಳುತ್ತಾರೆ. "ಶಿಶುನಾಳ ಶರೀಫ-ಗೋವಿಂದ ಭಟ್ಟರ ಶಿಷ್ಯ, ಅದೇ ರೀತಿ ಚೆನ್ನೂರು ಜಲಾಲಸಾಹೇಬ, ಕೂಡಲೂರ ಬಸವಲಿಂಗನ ಶಿಷ್ಯ, ಚಿತ್ತಾಪುರ ತಾಲೂಕಿನ ಅಣಕ ಸೂಗೂರು ಗ್ರಾಮದಲ್ಲಿ ಕ್ರಿ.ಶ.೧೭೭೦ರಲ್ಲಿ ಜನಿಸಿದ ಜಲಾಲಸಾಹೇಬ ಕನ್ನಡದ ಮೊಟ್ಟ ಮೊದಲ ಮುಸ್ಲಿಂ ತತ್ವಪದಕಾರ. ಅದೇ ರೀತಿ ಮೋಚನಳ್ಳಿ ಹಸನಸಾಹೇಬನ ಆರಾಧ್ಯದೈವ ಇಟಗಾದ ವೀರಭದ್ರ, ಆ ವೀರಭದ್ರ ದೇವನೇ ಹಸಮಸಾಹೇಬನ ತತ್ವಪದದಲ್ಲಿ 'ಇಟಪುರೀಶ' ಅಂಕಿತದಲ್ಲಿ ಪ್ರಕಟಗೊಂಡಿದ್ದಾನೆ".೧

'ಬಂಡಾಯ'ವೆಂಬುದು ಒಂದು ಮನೋಧರ್ಮ. ಅದು ಅನೇಕ ಸಂದರ್ಭಗಳಲ್ಲಿ ಮೌಲ್ಯವಾಗಿಯೂ ಬೆಳೆದು ನಿಂತಿದೆ. ಅನ್ಯಾಯವಾದಾಗ ಬಂಡೇಳುವುದು ಅದರ ಸಹಜ ಸ್ವಭಾವ. ಅತ್ಯಾಚಾರವಾದಾಗ ಪ್ರತಿಭಟಿಸುವುದು, ಅಸಮಾನತೆಯನ್ನು ತಿರಸ್ಕರಿಸುವುದು ಬಂಡಾಯದ ಪ್ರಮುಖ ಲಕ್ಷಣವಾಗಿದೆ. ಜನಪದರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಅನ್ಯಾಯ, ಅತ್ಯಾಚಾರ, ಸಮಾನತೆಗಾಗಿ ಹಲವಾರು ತೇರನಾದ ಬಂಡಾಯ ಎದ್ದಿರುವ ಪ್ರಸಂಗಗಳು ಕಾಣುತ್ತೇವೆ. ರಾಜಕೀಯವಾಗಿ ಹೇಳುವುದಾದರೆ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ಹೈದ್ರಾಬಾದ ಕರ್ನಾಟಕದ ಪ್ರದೇಶಕ್ಕೆ ಸೇರಿರುವ ಬೀದರ, ಗುಲಬರ್ಗಾ, ರಾಯಚೂರ, ಕೊಪ್ಪಳ ಜಿಲ್ಲೆಗಳಿಗೆ ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟು ಈ ಪ್ರದೇಶದ ಅಮಾಯಕರನ್ನು ನಿರಂತರ ಶೋಷಣೆಗೊಳಪಡಿಸಿದರು. ಇವರ ದಬ್ಬಾಳಿಕೆ ಜಾಸ್ತಿಯಾಯಿತು. ಆಸ್ತಿ-ಬಂಗಾರ ಬೆಳ್ಳಿ ಲೂಟಿ ಮಾಡುವುದು, ಸ್ತ್ರೀಯರ ಮಾನಭಂಗ ಮಾಡುವುದು ರಜಾಕಾರರು ಬೆಂಕಿ ಹಚ್ಚಿದರು, ನೂರಾರು ಮಕ್ಕಳ ರುಂಡಗಳನ್ನು ಅವರು ಚೆಂಡಾಡಿರುವುದನ್ನು ಖಂಡಿಸಿ ರಜಾಕಾರ ವಿರುದ್ಧ ಹೆಣ್ಣು ಗಂಡು ಎನ್ನದೇ ಎಲ್ಲರು ಸೇರಿ ಹೋರಾಡಿ ೧೯೪೮ ಸೆಪ್ಟೆಂಬರ್ ೧೭ರಂದು ಸ್ವಾತಂತ್ರ್ಯ ಪಡೆದುಕೊಂಡಿರುವುದನ್ನು ಡಾ. ಬಸವರಾಜ ಸಬರದರವರು ತಮ್ಮ ಬಂಡಾಯ ಜಾನಪದ ಕೃತಿಯೊಳಗೆ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.

"ಈ ಕ್ರಾಂತಿ ಕಾರ್ಯದೊಳಗ
ಹೆಣ್ಣುಮಕ್ಕಳು ಆವಾಗ ಟೊಂಕ
ಕಟ್ಟಿ ನಿಂತರು ಮ್ಯಾಲ
ಹೆಣ್ಣು ಮಕ್ಕಳು ಕಲ್ಲು ಕೊಡುವರು
ಗಂಡಸರು ಹೊಡೆಯುವರು ಮೂರು
ತಾಸು ಹಟಾಯಿಸಿದರು //ಕೋಲಣ್ಣ ಕೋಲ//
– (ವಿರೂಪಾಕ್ಷ ಮಠಪತಿ – ಭುಲಾಯಿ ಪದ ೧೯೮೨)

ಈ ರಜಾಕಾರರ ಹಾವಳಿ ಸಂದಭ್ದಲ್ಲಿಯೂ ಹೆಣ್ಣುಮಕ್ಕಳು ಮಹತ್ವದ ಪಾತ್ರವಹಿಸಿರುವುದು ಸ್ಪಷ್ಟವಾಗಿದೆ. ಹಲಗಲಿ ಬೇಡರ ಬಂಡಾಯದಲ್ಲಿ ರಾಮಿಯಂತಹ ಒಬ್ಬ ಹೆಣ್ಣುಮಗಳು ಹೋರಾಡಿದರೆ, ಈ ಹೋರಾಟದಲ್ಲಿ ಹಲವಾರು ಹೆಣ್ಣು ಮಕ್ಕಳು ಮಹತ್ವದ ಪಾತ್ರವಹಿಸಿದ್ದಾರೆ.

ಜನಪದ ದೈವಗಳನ್ನು ಮನದೈವಗಳು, ಕುಲದೈವಗಳು, ಗ್ರಾಮದೈವಗಳು, ಪ್ರಾಂತದೈವಗಳು ಮತ್ತು ನಾಡದೈವಗಳು ಎಂದು ವರ್ಗಿಕರಿಸಬಹುದು. ಗ್ರಾಮದೈವಗಳಲ್ಲಿ ಹಾಗೂ ನಾಡದೈವಗಳಲ್ಲಿ ಹೆಣ್ಣುದೈವಗಳೇ ಪ್ರಧಾನಸ್ಥಾನ ಪಡೆದಿವೆ. ಈ ಜನಪದ ದೈವಗಳ ವಾಸಸ್ಥಾನ ತುಂಬಾ ಸರಳವಾದುದೆಂಬ ಮಾತಂತೂ ಸತ್ಯ. ಜನಪದ ದೈವಗಳಲ್ಲಿ ವ್ಯಕ್ತಿ ದೈವಗಳು ಸೇರಿಕೊಂಡಿವೆ. ಸತ್ತು ಹೋದವರು, ತ್ಯಾಗ – ಬಲಿದಾನ ಮಾಡಿದವರು ಪೂಜ್ಯರಾಗಿ ನಮ್ಮ ಜನಪದರಿಗೆ ಕಂಡಿದ್ದಾರೆ. ಗ್ರಾಮದೇವತೆಯ ಹೆಸರಿನಲ್ಲಿ ಬಿಡುವ ಹೋರಿಕರಕ್ಕೆ ಬಸವನೆಂದು ಕರೆದರೆ, ಕೋಷಕ್ಕೆ ದೇವರಕ್ವಾಣಯೆಂದು ಕರೆಯುತ್ತಾರೆ. ಅಮ್ಮನ ಜಾತ್ರೆಯಲ್ಲಿ ಗುಡಿಯಲ್ಲಿ ಸಿಂಗರಿಸಿ ತೋರಣ ಕಟ್ಟುತ್ತಾರೆ. ಆನಪದರು ತಮ್ಮ ಕಾವ್ಯದಲ್ಲಿ ಅಮ್ಮನ ಗುಡಿಯನ್ನು, ಆಕೆಯ ವಾಸಸ್ಥಾನವನ್ನು ವರ್ಣನಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

"ಗಚ್ಚೀನ ಗುಡಿಯಾಕಿ ಗಜನ ಮಂಟಪದಾಕಿ
ಇದ್ದವರ ಮಗಳ ಏಸಾದನಂತೆ/ ಜಗದಂಬಾ"

"ಅಲ್ಲ್ಯಾಳ ಇಲ್ಲ್ಯಾಳ ಎಲ್ಲ್ಯಾಳ ಎಲ್ಲಮ್ಮ
ಕಲ್ಲ ಗುಡ್ಡದಲ್ಲಿ ಬೆರುದಾಳೆ ಬೆರುದಾಳೆ"
"ಹಳ್ಳಿಯಮನೆಯೊಳೆ ಬೆಳ್ಳಿಯ ಮಕದೊಳೆ
ಹನ್ನೆರಡಂಕಣ ಗುಡಿಯೊಳೆ ಚೌಡಮ್ಮ
ಬಟ್ಟು ಹೊಳೆದಾವು ಬಿಸಲಿಗೆ//"

ಜನಪದ ಗರತಿಯ ಈ ಹಾಡುಗಳಲ್ಲಿ ದೇವಿಯ ಜಂತೀಹುಲ್ಲಿನ ಗುಡಿಯೇ ಅರಮನೆಯಾಗಿ ಕಂಡಿದೆ. ಇದುದ್ದರಲ್ಲಿಯೇ ಸೌಂದರ್ಯವನ್ನು ಕಂಡುಕೊಳ್ಳುವುದು ಜನಪದರ ಗುಣ ಇಲ್ಲಿ ಗರತಿಯ ಹನ್ನೆರಡಂಕಣದ ಗುಡಿಯಲ್ಲಿಯೇ ಸಕಲೇಶ್ವರ್ಯವನ್ನು ಕಂಡಿದ್ದಾಳೆ. ಗಚ್ಚಿನ ಗುಡಿಯಲ್ಲಿ, ಕಲ್ಲುಗುಡ್ಡದಲ್ಲಿ ವಾಸಿಸುತ್ತಿರುವ ದೇವಿಯ ನೆಲೆಯನ್ನು ಇಲ್ಲಿ ಜನಪದ ಗರತಿ ಕಾವ್ಯಮಯವಾಗಿ ಕಟ್ಟಿಕೊಟ್ಟಿದ್ದಾಳೆ. ದೇವಿಯ ವಾಸಸ್ಥಾನದ ವಿವಿಧ ಬಗೆಗಳನ್ನು ಜನಪದರು ತಮ್ಮ ಸೃಜನಶೀಲ ಹಾಡುಗಳಲ್ಲಿ ಕಂಡುಕೊಂಡಿದ್ದಾರೆ. ನಾಕು ಮೂಲಿಯ ಮ್ಯಾಲಗಂಭ, ಗುಡಿಯ ಕಳಸ ಇವುಗಳನ್ನು ಬಿಡದೆ ಚಿತ್ರಿಸಿದ್ದಾರೆ.

ಡಾ. ಬಸವರಾಜ ಸಬರದರವರು ರಚಿಸಿ ಪ್ರಕಟಿಸಿದ 'ಕಡಕೋಳ ಮಡಿವಾಳಪ್ಪನವರ ಸಾಹಿತ್ಯ' ಎಂಬ ಕೃತಿಯು ತುಂಬಾ ಮೌಲಿಕವಾದುದು. ಈ ಕೃತಿಯಲ್ಲಿ ಮಡಿವಾಳಪ್ಪನವರ ಜನನ – ಬಾಲ್ಯ, ಅವರ ಶಿಷ್ಯ ಪರಂಪರೆ, ಸಾಹಿತ್ಯ ರಚನೆಯಲ್ಲಿ ಒಳಗೊಂಡಿರುವ ಪ್ರಮುಖ ವಿಚಾರಗಳಾದ ಗುರು – ಲಿಂಗ – ಜಂಗಮ, ಆತ್ಮನಿವೇದನೆ, ಸತಿಪತಿಭಾವ, ಅನುಭಾವ, ಸಾಮಾಜಿಕ ವಿಡಂಬನೆ, ಸಂದೇಶ ಹೀಗೆ ಹತ್ತು ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಮಡಿವಾಳಪ್ಪನವರು ಹನ್ನೆರಡನೇ ಶತಮಾನದ ಶರಣ ಪರಂಪರೆ ಯನ್ನು ಮುಂದುವರೆಸಿದ ಮಹಾನುಭಾವಿಯಾಗಿದ್ದಾನೆ. ಶರಣರಂತೆ ಇವರೂ ಕೂಡ ವಚನ ಹಾಗೂ ಸ್ವರವಚನ (ತತ್ವಪದ) ಎರಡೂ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಮಡಿವಾಳಪ್ಪನವರ ವಚನಗಳಲ್ಲಿ ಹಾಗೂ ಸ್ವರವಚನಗಳಲ್ಲಿ 'ಗುರು ಮಹಾಂತ' ಪ್ರಧಾನ ಅಂಕಿತವಾಗಿದೆ. ವಚನಗಳಲ್ಲಿ 'ಮಹಾಂತಯೋಗಿ' ಅಂಕಿತ ಬಂದರೆ ಅಂಕಿತ ಬಂದರೆ ಸ್ವರವಚನಗಳಲ್ಲಿ ಇದೇ ಹೆಸರಿನ ಅನೇಕ ಅಂಕಿತಗಳಿವೆ.

ಕಡಕೋಳ ಮಡಿವಾಳಪ್ಪನವರು ಜನಪದರಲ್ಲಿ ಅದರಲ್ಲೂ ಮೇಲ್ಜಾತಿಯವರು ಕೆಳಜಾತಿಯವರ ಮೇಲೆ ದೈಹಿಕ – ಮಾನಸಿಕ ಹಿಂಸೆ ಮಾಡುವುದಲ್ಲದೇ ದರೋಡೆ, ಕೊಲೆ, ಸುಲಿಗೆ ಮಾಡುವುದನ್ನು ಯಾವ ತಪ್ಪು ಮಾಡದ ಬಡವರ ಮೇಲೆ ತಪ್ಪು ಹೊರೆಸಿ ಕೋಟಿಗೆ ಅಲೆದಾಡಿಸಿ ಗಹಗಹಿಸಿ ನಗುತ್ತಿರುವವರು, ನಾಚಿಕೆ ಮಾನ ಮರ್ಯಾದೆ ಎಲ್ಲ ತಲೆಗೆ ಸುತ್ತಿಕೊಂಡೊರು ಎಂಬುದನ್ನು ವಿಡಂಬನಾತ್ಮಕವಾಗಿ ತಮ್ಮ ಸ್ವರವಚನಗಳ ಮೂಲಕ ಬಂಡಾಯದ ಮನೋಭಾವ ವ್ಯಕ್ತಪಡಿಸುತ್ತಾರೆ.

"ಮಾನಗೇಡಿ ಮಂದಿ ಹುಟ್ಟಿ ಮರ್ತ್ಯಾ ಕೆಡಿಸ್ಯಾರೊ
ಉಡಾಳ ಮಂದಿ ಊರೊಳಗ ಹಿಡಿಯಲ್ಲೋದರೊ/
ಪತ್ಯಾ ಮಾಡಾ ಉತ್ತಮರೆಲ್ಲ ಎತ್ತ ಹೋದರೊ
ಎಪ್ಪಾ, ಗಪ್ಪಾ ಹೊಡೆಯಾ ಅಪ್ಪದೇರು ಹೆಚ್ಚಿಗಾದರೋ//
ಪುಢಾರಿ ಘುಡಾರಿ ಮಂದಿ ಹೋಗಿ ದರೋಡೆ ಮಾಡ್ಯರೋ
ಪುಂಡ ಪುಂಡ ಮಂದಿ ಹೋಗಿ ಚಂಡಿ ಆಡ್ಯಾರೊ/
ಬಡವನ ಮ್ಯಾಲ ಖಟ್ಲಾ ಹೊರಿಸಿ ಕೋರ್ಟಿಗೆಳಿಸ್ಯಾರೊ
ಇವರು ನಾಚಿಕೆಯ ಹುರಿಯ ಮಾಡಿ ತೆಲಿಗೆ ಸುತ್ತ್ಯಾರೊ//
(ಕ. ಮ. ಸ್ವರವಚನಗಳು, ಪು: ೧೦೮. ಪದ: ೪೩)

ಹೀಗೆ ಕಡಕೋಳ ಮಡಿವಾಳಪ್ಪನವರು ಸಮಾಜಿಕ ತಾರತಮ್ಯ, ಜಾತಿ–ಮತ, ಪಂಥ, ಧರ್ಮ, ವರ್ಣ, ಮೇಲು–ಕೀಳು, ಡಾಂಭಿಕ ಭಕ್ತಿ, ದೇವರು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಲವು ದುಷ್ಕೃತ್ಯಗಳನ್ನು ಅನೇಕ ರೋಗಪೀಡಿತ ಸಂಪ್ರದಾಯಗಳನ್ನು ಖಂಡಿಸಿ ಅವುಗಳಿಗೆ ಮೂಲಾಮು ಹಚ್ಚುತ್ತಾ ಹೊಡೆದೊಡಿಸುವ ನುಡಿ, ಬಂಡಾಯದ ಚುರುಕನ್ನು ತಮ್ಮ ವಚನ, ಸ್ವರವಚನಗಳ ಮೂಲಕ ಸೊಗಸಾಗಿ ಹೇಳಿದ್ದಾರೆ.

ಜಾಗತೀಕರಣದಿಂದ ಜಾನಪದ ಕವಿಗಳನ್ನು ಮತ್ತು ಅವರ ಸಾಹಿತ್ಯವನ್ನು ಕಡೆಗಣಿಸುವತ್ತ ಸಾಗುತ್ತಿರುವ ದಿನಮಾನಗಳಲ್ಲಿ ಬಸವರಾಜ ಸಬರದರವರು ಹೈದ್ರಾಬಾದ ಕರ್ನಾಟಕದ ತತ್ವಪದಕಾರರನ್ನು ಪರಿಚಯಿಸುವುದರ ಮೂಲಕ ಅವರ ಜೀವನ ಮತ್ತು ಸಾಹಿತ್ಯವನ್ನು ಮರೆಮಾಚದಂತೆ ಜೀವಂತ ವಾಗಿರುವದಕ್ಕೆ ಪುಷ್ಟಿಕೊಟ್ಟು "ಹೈದ್ರಾಬಾದ ಕರ್ನಾಟಕದ ತತ್ವಪದಗಳು" ಎಂಬ ಕೃತಿ ೨೦೦೦ನೇ ವರ್ಷದಲ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟವಾಗಿದೆ. ಜಾನಪದ ಖಣಿಯಂತಿರುವ ತತ್ವಪದಕಾರರ ಹಿತವಚನಗಳನ್ನು ಒಂದೇಡೆ ದಾಖಲಿಸಿರುವುದು ಪ್ರಶಂಸನಾರ್ಹವಾಗಿದೆ. ಗುಲಬರ್ಗಾ ಜಿಲ್ಲೆಯ ೨೮ ತತ್ವಪದಕಾರರ ತತ್ವಪದಗಳನ್ನು, ರಾಯಚೂರ ಜಿಲ್ಲೆಯ ೨೨ ತತ್ವಪದಕಾರರ ತತ್ವಪದಗಳನ್ನು, ಬೀದರ ಜಿಲ್ಲೆಯ ೧೧ ತತ್ವಪದಕಾರರ ತತ್ವಪದಗಳನ್ನು, ಕೊಪ್ಪಳ ಜಿಲ್ಲೆಯ ೩ ತತ್ವಪದಕಾರರ ತತ್ವಪದಗಳನ್ನು ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಸಂಪಾದಿಸಿ ಪ್ರಕಟಿಸಿದ್ದಾರೆ. ಇದಲ್ಲದೇ ಗುಲಬರ್ಗಾ ಜಿಲ್ಲೆ, ರಾಯಚೂರು ಜಿಲ್ಲೆ, ಬೀದರ ಜಿಲ್ಲೆ, ಕೊಪ್ಪಳ ಜಿಲ್ಲೆಯ ಅನುಭಾವಿ ಕವಿಗಳ ಕುರಿತಾಗಿ ಪ್ರತ್ಯೇಕವಾಗಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆಯಡಿಯಲ್ಲಿ ಡಾ. ಬಸವರಾಜ ಸಬರದರವರು ಸಂಪಾದಿತ "ಕೂಡಲೂರ ಬಸವಲಿಂಗ ಶರಣರು ಮತ್ತು ಇತರರ ತತ್ವಪದಗಳು" ಎಂಬ ಕೃತಿಯನ್ನು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ಹೀಗೆ ಬಸವರಾಜ ಸಬರದ ಅವರು ಜಾನಪದ ವಿಷಯಕ್ಕೆ ಸಂಬಂಧಿಸಿದಂತೆ ಅತಿ ಮೌಲಿಕವಾದ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಮರೆಮಾಚುವಂತ ಅನೇಕ ಜನಪದ ಕವಿಗಳನ್ನು ಜೀವಂತವಾಗಿರುವಂತೆ ಅವರ ಸಾಹಿತ್ಯವನ್ನು ಸಂಪಾದಿಸಿಕೊಟ್ಟಿದ್ದಾರೆ. ಜಾನಪದ ಸಾಹಿತ್ಯದ ಕುರಿತಾಗಿ ಅನೇಕ ಲೇಖನಗಳನ್ನು ರಚಿಸಿ ಪ್ರಕಟಿಸುವುದರ ಮೂಲಕ ಚಿರಪರಿಚತರಾಗಿ ಉಳಿದಿದ್ದಾರೆ.

## ಪರಾಮರ್ಶನ ಗ್ರಂಥಗಳು

೧. ಜಾನಪದ ಆಯಾಮಗಳು : ಡಾ. ಬಸವರಾಜ ಸಬರದ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೨೦೧೦
೨. ಬಂಡಾಯ ಜಾನಪದ : ಡಾ. ಬಸವರಾಜ ಸಬರದ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೨೦೦೬
೩. ಜನಪದ ದೈವಗಳು : ಡಾ. ಬಸವರಾಜ ಸಬರದ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೨೦೦೯
೪. ಕಡಕೋಳ ಮಡಿವಾಳಪ್ಪನವರ ಸಾಹಿತ್ಯ : ಡಾ. ಬಸವರಾಜ ಸಬರದ, ಪ್ರಸಾರಾಂಗ ಕನ್ನಡ ವಿ.ವಿ.
೫. ಹಂಪಿ, ೨೦೧೦